ವಿರುತ್ತಿದೆ, ಇವರ ಸಂಬಳ ಮಾತ್ರ ಇದ್ದಂತೆಯೇ ಇದೆ. ಕೆಲಸ ಬಿಡಲು ಮಾತ್ರ ಸಾಧ್ಯವಿಲ್ಲ. ಕಾರಣ ಆರಕ್ಷರ ಆಗ್ರಹಕ್ಕೆ ತುತ್ತಾಗುವ ಭಯ. ಹೀಗಾಗಿ ದಿನಕ್ಕೊಂದು ರೂಪಾಯಿಯಾಸೆ, ಭಿಕ್ಷೆ ಪಡೆದು ದಂಡಿಯುತ್ತಲೇ ಹೋಗುತ್ತಿದ್ದಾರೆ. ದಿನ ಉರುಳುತ್ತಿವೆ ವರ್ಷ ಉರುಳುತ್ತಿವೆ, ಕಾಲ ಬದಲಾಗುತ್ತಿದೆ. ಈ ಅವಸ್ಥೆಯಂ ಕಂರಿತು ಯಾವ ಬದಲಾವಣೆಯೂ ಆಗುತ್ತಿಲ್ಲ, ಯಾವ ವ್ಯವಸ್ಥೆಯೂ ಕಾಳಜಿ ತೋರಿಸುತ್ತಿಲ್ಲ. ಪೋಲೀಸ್ ಸ್ಟೇಶನ್ನಿನ ಎಲ್ಲಾ ಕೊಳೆ ತೆಗೆಯಲು ಸರಕಾರದಿಂದ ಆಗದಿದ್ದರೆ, ಕಸ ಗುಡಿಸಿ ಸ್ವಚ್ಛ ಮಾಡುವವರ ಸಂಬಳದಲ್ಲಾದರೂ ಏರಿಕೆಮಾಡಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ

ಶ್ರೀ ವೀರಣ್ಣ (ಸಣ್ಣ ಉಳಿತಾಯ, ಬಂದೀಖಾನೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ಪೋಲೀಸ್ ಇಲಾಖೆಯಲ್ಲಿ 'ಡಿ' ದರ್ಜೆಯ ೨೨೬ ಜನ ಕಸ ಗುಡಿಸುವವರು ಇದ್ದು, ಅವರ ಶ್ರೇಣಿ ೭೮೦ ರಿಂದ ೧೦೪೦ರವರೆಗೆ ಇದೆ. ಇವರನ್ನು ದೊಡ್ಡ ಕಛೇರಿಗಳಲ್ಲಿ ಮತ್ತು ಸಿಬ್ಬಂದಿ ಜಾಸ್ತಿಯಿರುವ ಉಪ ಕಛೇರಿಗಳಲ್ಲಿ ನೇಮಿಸಲಾಗಿದೆ. ಸಿಬ್ಬಂದಿ ಕಡಿಮೆ ಇರುವ ಪೋಲೀಸ್ ಠಾಣೆಗಳಲ್ಲಿ ಹಾಗೂ ಹೊರವಲಯ ಠಾಣೆಗಳಲ್ಲಿ ಸಿಗಧಿತ ಒಂದು ಅಥವಾ ಎರಡು ಗಂಟೆ ಮಾತ್ರ ಕೆಲಸ ಇರುವುದರಿಂದ ಸಾದಿಲ್ವಾರು ನಿಧಿಯಿಂದ ೧೨೦ ರೂಪಾಯಿಗಳವರೆಗೂ ಮಾಸಿಕ ವೇತನದ ಮೇಲೆ ಖಾಸಗಿ ಜನರನ್ನು ನೇಮಿಸಿಕೊಳ್ಳಲಾಗಿದೆ.

ಪ್ರಸ್ತುತ ಬೆಂಗಳೂರಿನಲ್ಲಿ ಕಡಿಮೆ ವೇತನ ಪಡೆಯುತ್ತಿರುವ ಕಸಗುಡಿಸುವವರ ವೇತನವನ್ನು ಹೆಚ್ಚು ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶಾಸನ ರಚನಾ ಕಲಾಪಗಳು

೧೯೮೮ನೇ ಇಸವಿಯ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮಗಳ (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ರೇಷ್ಮೆ ಮಂತ್ರಿಗಳು).

"೧೯೮೮ನೇ ಇಸವಿಯ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೊರುತ್ತೇನೆ.

ಅಧ್ಯಕ್ಷರು.—
ಪ್ರಸ್ತಾವ ಏನೆಂದರೆ.

"೧೯೮೮ನೇ ಇಸವಿಯ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡಬೇಕೆಂದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್.—

"೧೯೮೮ನೇ ಇಸವಿಯ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.— ವಿಧೇಯಕವನ್ನು ಮಂಡಿಸಲಾಯಿತು. *